**ಅ.ದಾವಾ ನಂ. 161/2017** **ಡಿ.ಡಬ್ಲ್ಯೂ-1**

**ದಿನಾಂಕ 27/09/2023 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಬಿ.ಹೆಚ್.ವಿ. ವಕೀಲರಿಂದ**

ನಾನು ನ್ಯಾಯಾಲಯಕ್ಕೆ ಆಸ್ತಿಯ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ನನ್ನ ಮಕ್ಕಳಿಗೆ ದಾನ ಪತ್ರವನ್ನು ನಾನೇ ಬರೆದುಕೊಟ್ಟಿದ್ದೇನೆ. ದಾನಪತ್ರ ಬರೆಯಲು ಮಾಹಿತಿ ನೀಡಿದವರು ಯಾರು ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಸ್ಟಾಂಪ್ ಪೆಂಡರ್ ಬಳಿ ಹೋದಾಗ ಅವರು ಹೀಗೆ ಬರೆಯಬೇಕು ಎಂದು ಹೇಳಿದರು ಮಾಹಿತಿಯನ್ನು ನಾನೇ ನೀಡಿದ್ದೇನೆ ಎಂದು. ನನ್ನ ದಾನಪತ್ರದಲ್ಲಿ ನನಗಿರುವ ಎಲ್ಲಾ ಮಕ್ಕಳನ್ನೂ ಅದರಲ್ಲಿ ಸೇರಿಸಿಲ್ಲ. ದಾನಪತ್ರವನ್ನು 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾತ್ರ ಮಾಡಿರುತ್ತೇನೆ . ರಮೇಶನಿಗೆ ದಾನಪತ್ರದಲ್ಲಿ ಏನೂ ಕೊಡದೇ ಇರುವ ಬಗ್ಗೆ ಕಾರಣ ಏನು ನೀಡಿದ್ದೀರಿ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಕುಮಾರ ಮತ್ತು ರವಿಕುಮಾರ ನನ್ನ ಶುಶ್ರೂಷೆ ಮಾಡುತ್ತಿದ್ದ ಕಾರಣ ರಮೇಶನಿಗೆ ನಾನು ಕೊಟ್ಟಿಲ್ಲ ಎಂದು. ರಮೇಶ ಮತ್ತು ಪುಟ್ಟರಾಜು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿಲ್ಲ. ನಾನು ಮಾಡಿರುವ ದಾನಪತ್ರ ಮೋಸದಿಂದ ಕೂಡಿದ್ದಾಗಿದೆ ಎಂದರೆ ಸರಿಯಲ್ಲ

2. ನಾನು ಆಸ್ತಿಯನ್ನು ಖರೀದಿ ಮಾಡಲು ಯಾರ ಬಳಿಯೂ ಸಾಲ ಮಾಡಿಲ್ಲ. 1991 ರ ಸಾಲಿನಲ್ಲಿ ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ. ಒಟ್ಟು ಕುಟುಂಬದ ಆದಾಯದಿಂದ ನಾನು ದಾವಾ ಸ್ವತ್ತಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನು ಮಂಜೂರಾದಾಗಲೂ ನಾವೆಲ್ಲರೂ ಒಟ್ಟು ಕುಟುಂಬದಲ್ಲೇ ಇದ್ದೆವು ಎಂದರೆ ಸರಿ. ಖರೀದಿ ಮಾಡಿದ ಮತ್ತು ಮಂಜೂರಾದ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಿಂದ ಖರೀದಿ ಮಾಡಲಾಗಿದೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನನ್ನ ಸ್ವಯಾರ್ಜಿತ ಹಣದಿಂದ ಅವುಗಳನ್ನು ಸಂಪಾದನೆ ಮಾಡಿದ್ದೇನೆ.

ಖುಷ್ಕಿ ಜಮೀನಿನಲ್ಲಿ 2 ಎಕರೆ ವಿಸ್ತೀರ್ಣದಲ್ಲಿ ಯಾವ ಆದಾಯವೂ ಬರುವುದಿಲ್ಲ ಎಂದು. ವಾದಿಗಳು ನಾನು ಖರೀದಿ ಮಾಡಿದ ಕಾಲಕ್ಕೆ ವಯಸ್ಕರಾಗಿದ್ದು ಅವರ ದುಡಿಮೆಯಿಂದ ನಾನು ಆಸ್ತಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಅವರು ನನಗೆ ಯಾವುದೇ ದುಡಿಮೆ ನೀಡಿಲ್ಲ. ವಾದಿಗಳೇ ಶ್ರಮಪಟ್ಟಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳೆಲ್ಲವೂ ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ನಾನು 2 ಮತ್ತು 3 ನೇ ಪ್ರತಿವಾದಿಗಳು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾನಪತ್ರ ಸೃಷ್ಟಿಸಿ ಈ ದಿನ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.